Education to Excel
**SBRR Mahajana First Grade College (Autonomous)**
Jayalakshmipuram, Mysuru – 570 012
**Affiliated to University of Mysore, Re-Accredited by NAAC with 'A' Grade**
College with Potential for Excellence

07.02.2020

# Three Days Intercollegiate Fest MAHA 2020 Inaugurated at Mahajana

"In an age of Info-obesity there is a need for info-diet" opined Prof. K. Krishnegowda, intellectual thinker and renowned humorist inaugurating the three day national level fest MAHAM 2020 organised by SBRR Mahajan First Grade College (Autonomous) Mysuru.

Prof. Krishnegowda addressed the young students on the need for gaining real knowledge and understands what is true culture. In his inaugural address he said we are living in an age of information; mere information is not knowledge. Therefore, there is a need to learn to skim through the glut of information and take what is only required. It is only knowledge that gives one the ability to grasp and be rationale, the speaker added. He further pointed out to the dangers of technology. Prof. Krishnegowda said that the smart phone is a window to the world of magic where information is over loaded. This limits the thinking capacity of the present generation and makes them indecisive. He pointed out that there are 1,58,000 different kinds of apps and with his characteristic touch of humour the speaker said how it was easy to by a car earlier based on the popular opinion whereas now with easy access to information about various brands the choice becomes difficult.

Addressing the large gathering of young, enthusiastic participants Prof. Krishnegowda defined what is true culture and said "Culture is the noble aspiration to leave the world a better place for the future generation". Culture is also the pursuit of the perfection within one and young minds should strive to carve a beautiful sculpture of their personality with core values. He urged them not to give too much importance to external appearance as it does not give any extra mileage.

President of Mahajana Education Society, Sri T Muralidhar Bhagavat, presided over the inaugural programme. In his address to the students, he emphasised the need for creating a learning atmosphere outside the class rooms and the fest is a step in the right direction. Hon. Secretary of Mahajana Education Society, Dr. Vijayalakshmi Muralidhar, congratulated the student team on their initiative to organize the fest on a large scale.

Principal Dr. Venkataramu S, welcomed the gathering and introduced the guests of honour. Chief Executive Officer Dr. Ramesh S R, Administrative officer Prof. P. Sarojamma, Dr. C.K. Renukarya, Director, Mahajana PG Centre, Vice-Principal, Smt. Jayakumari B.R. and student coordinator of MAHAM 2020 Ravi Shankar were on the dais.

Dr. H.R. Thimmegowda, Staff coordinator of MAHA 2020 proposed the vote of thanks Kumari Bharathi & Bimba rendered the invocation and students Ekatha and Arpitha were the masters of ceremony.

To
The Editor                                        For Favour of Publication

Public Relations Officer

ಶಿಕ್ಷಣದಿಂದ ಶ್ರೇಷ್ಠತೆ

# ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)

ಜಯಲಕ್ಷ್ಮೀಪುರಂ, ಮೈಸೂರು – 570 012

ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಹಾಗೂ ನ್ಯಾಕ್‌ನಿಂದ "ಎ" ಶ್ರೇಣಿಯ ಮಾನ್ಯತೆ ಪಡೆದಿದೆ

ಶ್ರೇಷ್ಠತೆಯ ಸಾಮರ್ಥ್ಯವಿರುವ ಕಾಲೇಜು

ದಿನಾಂಕ 07.02.2020

## ರಾಷ್ಟ್ರೀಯ ಕಾಲೇಜು ಉತ್ಸವ 'ಮಹಮ್–2020' ಚಾಲನೆ

ಮೈಸೂರು, ಫೆಬ್ರವರಿ 7–ಮೈಸೂರಿನ ಪ್ರತಿಷ್ಠಿತ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಕಾಲೇಜು ಉತ್ಸವ 'ಮಹಮ್–2020' ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರಿನ ಸಂಸ್ಕೃತಿ ಚಿಂತಕರು ಹಾಗೂ ಪ್ರಖರ ವಾಗ್ಮಿಗಳಾದ ಪ್ರೊ. ಎಂ.ಕೃಷ್ಣೇಗೌಡರವರು ಆಗಮಿಸಿದ್ದ ಇತರೆ ಗಣ್ಯರ ಸಮ್ಮುಖದಲ್ಲಿ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ನೆರವೇರಿಸಿದರು.

ಉದ್ಘಾಟನಾ ಭಾಷಣದಲ್ಲಿ, ಪ್ರೊ.ಕೃಷ್ಣೇಗೌಡರವರು ಮಾತನಾಡುತ್ತಾ, ಮಹಾಜನ ವಿದ್ಯಾಸಂಸ್ಥೆ ಇಡೀ ಮೈಸೂರಿನಲ್ಲೇ ತುಂಬಾ ಹಳೆಯದಾದ ಪ್ರತಿಷ್ಠಿತ ಸಂಸ್ಥೆ. ಈ ಸಮಾರಂಭಕ್ಕೆ ಆಗಮಿಸಿರುವುದು ನನಗೆ ಹೆಮ್ಮೆಯಾಗುತ್ತದೆ. ಪ್ರಪಂಚದಲ್ಲಿ ಮನುಷ್ಯನ ಸೃಷ್ಠಿ ವಿಕಾಸ ಮತ್ತು ಉಗಮ ಒಂದು ಅದ್ಭುತ. ಪ್ರಕೃತಿಯಿಂದ ಮನುಷ್ಯ ಬಹಳಷ್ಟು ಪಾಠಗಳನ್ನು ಕಲಿಯುತ್ತಾನೆ. ಮನುಷ್ಯನಿಗೆ ಮಾತು ಬಹಳ ದೊಡ್ಡ ವಿಸ್ಮಯ. ಮಾತಿನಿಂದ ಅವನ ಸಂಸ್ಕೃತಿ ತಿಳಿಯುತ್ತದೆ. ಅವನು ತನ್ನ ಕಂಠವನ್ನು ಹೇಗೆ ಬಳಸುತ್ತಾನೆ ಎಂಬುದು ಮುಖ್ಯವಾಗುತ್ತದೆ, ನಮ್ಮ ಮಾತು ಇನ್ನೊಬ್ಬರಿಗೆ ಆಸಕ್ತಿ ಮತ್ತು ಇಷ್ಟವಾಗಬೇಕು. ಹೇಗೆ, ಎಲ್ಲಿ, ಯಾವ ರೀತಿ ನಾವು ಮಾತನಾಡಬೇಕು ಎಂಬುದನ್ನು ಮೊದಲು ಕಲಿಯಬೇಕು. ವಿದ್ಯಾರ್ಥಿಗಳೇ, ನೀವು ಕಾಲೇಜಿನಲ್ಲಿ ಕಲಿತ ಪಾಠ ನಿಮ್ಮ ನೆನಪಿನಲ್ಲಿ ಬಹಳ ಕಾಲ ಉಳಿಯುವುದಿಲ್ಲ. ಆದರೆ ಕೌಶಲ್ಯಜ್ಞಾನ ಎಂದಿಗೂ ನೀವು ಮರೆಯುವುದಿಲ್ಲ ಎಂದರು.

ಮುಂದುವರಿದು ಮಾತನಾಡುತ್ತಾ, ಇಂದು ನಾವು ಮಾಹಿತಿ ಯುಗವನ್ನು ಕಾಣುತ್ತಿದ್ದೇವೆ. ಬಹಳಷ್ಟು ಮಾಹಿತಿ ನಿಮ್ಮ ಕೈಯಲ್ಲೇ ಇದೆ. ನಿಮಿಷ ನಿಮಿಷಕ್ಕೂ ನಾವು ಓದಬಹುದಾಗಿದೆ ಹಾಗೂ ಕಾಣಬಹುದಾಗಿದೆ. ಆದರೆ ಆ ಮಾಹಿತಿಯನ್ನು ಹೇಗೆ ಉಪಯೋಗಿಸಬೇಕು ಎಂಬುದು ನಮಗೆ ಕಷ್ಟವಾಗುತ್ತಿದೆ. ಎಲ್ಲದಕ್ಕೂ ನಾವು ತಂತ್ರಜ್ಞಾನದ ಮೊರೆ ಹೋಗುತ್ತಿದ್ದೇವೆ. ಇದರಿಂದ ನಮ್ಮಲ್ಲಿ ಬರೆಯುವ ಕೌಶಲ್ಯ ಹಾಗೂ ಯೋಚನಾ ಶಕ್ತಿ ಕುಂಠಿತವಾಗುತ್ತಿದೆ. ವಿದ್ಯಾರ್ಥಿಗಳ ಯಶಸ್ಸು ಸರಿಯಾದ ಮಾಹಿತಿಯನ್ನು ಪಡೆದುಕೊಳ್ಳುವುದರ ಮೇಲೆ ಅವಲಂಬಿತವಾಗಿದೆ. ನಮ್ಮಲ್ಲಿ ವ್ಯಕ್ತಿತ್ವ ವಿಕಸನ ಅಗತ್ಯ.ಕಲೆ ಎಂಬುದು ಸಂಸ್ಕೃತಿಯ ಪ್ರತಿರೂಪ. ಕಲೆ ಪ್ರತಿಭೆಯ ಸಂಕೇತ. ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದರೆ ಸರಿಯಾಗಿ ಮಾತನಾಡುವುದನ್ನು ಕಲಿಯಿರಿ. ಅನುಭವಗಳು ನಮಗೆ ಸೃಜನಶೀಲಶಕ್ತಿ, ಮಾನವೀಯ ಮೌಲ್ಯ ಮತ್ತು ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕೆಂದು ಕಲಿಸುತ್ತದೆ. ಇದರಿಂದ ನಾವು ನಮ್ಮ ಜೀವನದಲ್ಲಿ ಪ್ರಗತಿಯನ್ನು ಕಾಣಬಹುದು. ಪ್ರತಿಭೆ ಎಲ್ಲರಲ್ಲೂ ಇದೆ, ಆದರೆ ಅದನ್ನು ಹೇಗೆ ಉಪಯೋಸಿಕೊಳ್ಳಬೇಕೆಂಬ ದಾರಿಯ ಕೊರತೆ ಇದೆ. ಮನುಷ್ಯನ ಕುತೂಹಲ ಕೆರಳಿಸಿ, ತನ್ಮೂಲಕ ಉತ್ತರ ಪಡೆಯುವುದೇ ಶಿಕ್ಷಣ. ಮನುಷ್ಯ ತನ್ನ ಅರಿವನ್ನು ಹೆಚ್ಚಿಸಿ, ಬೌದ್ಧಿಕ ವಿಕಾಸವಾಗುವುದೇ ಶಿಕ್ಷಣ. ಅನುಭವದ ಕಲಿಕೆಗೆ ವಿದ್ಯಾರ್ಥಿಗಳು ಹೆಚ್ಚಿನ ಪ್ರಾಧಾನ್ಯತೆಕೊಡಬೇಕು. ಇದರಿಂದ ಕೌಶಲ್ಯ ಅಭಿವೃದ್ಧಿಯಾಗುತ್ತದೆ. ಅನುಭವಗಳು ನಮಗೆ ಸೃಜನಶೀಲ ಶಕ್ತಿ, ಮಾನವೀಯ ಮೌಲ್ಯ ಮತ್ತು ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ಕಲಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿ, ಎಲ್ಲರಿಗೂ ಶುಭಕೋರಿದರು.

ಸಮಾರಂಭದ ಅಧ್ಯಕ್ಷೀಯ ಭಾಷಣದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಶ್ರೀ ಟಿ. ಮುರಳೀಧರ್ ಭಾಗವತ್ ಮಾತನಾಡುತ್ತಾ, ಇಂದಿನ ಜಾಗತೀಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳೇ, ನೀವು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದರೆ, ಮಾನಸಿಕ ಮತ್ತು ಆತ್ಮಸ್ಥೈರ್ಯ ಮುಖ್ಯ. ಕೀಳರಿಮೆಯನ್ನು ಬಿಟ್ಟು, ಸೇವಾ ಮನೋಭಾವದಿಂದ ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡಿ ಎಂದರಲ್ಲದೆ, ಪ್ರಪ್ರಥಮವಾಗಿ 'ಮಹಮ್ 2020' ಉತ್ಸವ ಹಾಗೂ ಈ ಸಮಾರಂಭವನ್ನು ಸುಂದರವಾಗಿ, ಅಚ್ಚುಕಟ್ಟಾಗಿ ಹಮ್ಮಿಕೊಂಡು, ಹಗಲಿರುಳು ಶ್ರಮವಹಿಸಿ ದುಡಿದ ಎಲ್ಲಾ ಅಧ್ಯಾಪಕ ವೃಂದದವರಿಗೂ, ವಿದ್ಯಾರ್ಥಿ ಹಾಗೂ ಸಂಚಾಲಕರಿಗೂ, ಆಧ್ಯಾಪಕೇತರರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಗೌ.ಕಾರ್ಯದರ್ಶಿಗಳಾದ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್‌ರವರು ಮಾತನಾಡಿ, ವಿದ್ಯಾರ್ಥಿಗೆ ಗ್ರಹಿಕೆ, ಕೌಶಲ್ಯ ಮತ್ತು ನೈಪುಣ್ಯತೆಗೆ ಪ್ರಾಮುಖ್ಯತೆ ಕೊಡಿ. ಕಾಲೇಜು ನಿಮಗೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿದೆ, ಅದನ್ನು ಸರಿಯಾಗಿ ಬಳಸಿಕೊಂಡು, ನಿಮ್ಮ ವಿದ್ಯಾರ್ಥಿ ಜೀವನವನ್ನು ಸದುಪಯೋಗಪಡಿಸಿಕೊಳ್ಳಿ ಹಾಗೂ ಇಂತಹ ಬೃಹತ್ ಸಮಾರಂಭವನ್ನು ಆಯೋಜಿಸಲು ಸಹಕರಿಸಿದ ಎಲ್ಲರಿಗೂ ಶುಭಕೋರಿದರು.

ವೇದಿಕೆಯಲ್ಲಿ ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಗಳಾದ ಪ್ರೊ. ಪಿ. ಸರೋಜಮ್ಮ, ಪೂಜಾಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಪ್ರೊ. ಸಿ. ಕೆ. ರೇಣುಕಾರ್ಯ, ಕಾಲೇಜಿನ ಮುಖ್ಯಕಾರ್ಯ ನಿರ್ವಹಣ

ಅಧಿಕಾರಿ ಡಾ. ಎಸ್.ಆರ್. ರಮೇಶ್, ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಶ್ರೀಮತಿ ಬಿ.ಎಸ್. ಜಯಕುಮಾರಿ, ಮಹಮ್–2020 ಕಾರ್ಯಕ್ರಮ ಸಂಯೋಜನಾಧಿಕಾರಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಮಹಮ್–2020ನ ವಿದ್ಯಾರ್ಥಿ ಸಂಯೋಜಕರಾದ ಶ್ರೀ ರವಿಶಂಕರ್ ಉಪಸ್ಥಿತರಿದ್ದರು.

ಕಾಲೇಜಿನ ವಿದ್ಯಾರ್ಥಿನಿ ಭಾರತಿ ಹಾಗೂ ಬಿಂಬ ಪ್ರಾರ್ಥಿಸಿದರು. ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್. ವೆಂಕಟರಾಮು ಗಣ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜನಾಧಿಕಾರಿಗಳಾದ ಡಾ. ಎಚ್.ಆರ್. ತಿಮ್ಮೇಗೌಡ ವಂದಿಸಿದರು. ವಿದ್ಯಾರ್ಥಿ ಸಂಯೋಜಕರಾದ ಶ್ರೀ ರವಿಶಂಕರ್ ಎಸ್ ಮಹಮ್–2020 ಕಾರ್ಯಕ್ರಮವನ್ನು ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ದೇಶದ ಹಾಗೂ ರಾಜ್ಯದ ವಿವಿಧ ಕಾಲೇಜುಗಳಿಂದ ಆಗಮಿಸಿದ ವಿದ್ಯಾರ್ಥಿಗಳು, ಕಾಲೇಜಿನ ಬೋಧಕ ಹಾಗೂ ಬೋಧಕೇತರ ವೃಂದದವರು, ಇತರೆ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಪ್ರಕಟಣೆಯ ಕೃಪೆಗಾಗಿ

ಗೆ,

ಸಂಪಾದಕರು,

ಸಾರ್ವಜನಿಕ ಸಂಪರ್ಕಾಧಿಕಾರಿಗಳು